ನನ್ನವನಾಗದ ವಿಕ್ರಮ ದೇಹದ ಸುಖಕ್ಕೆ ಬೇರೆ ಹೆಂಗಸರನ್ನು ಹುಡುಕಿಕೊಂಡು ಹೋದರೆ ನನಗೆ ಮೋಸ ಮಾಡಿದ ಎಂಬ ಭಾವನೆ ಏಕೆ? ಅಷ್ಟರಮಟ್ಟಿಗೆ ಅವನ ಆಕ್ರಮಣ ಕಡಿಮೆಯಾಯಿತಲ್ಲ ಎಂದು ಸಂತಸಪಡಬೇಕಲ್ಲವೇ? ಅಥವಾ ದುಡ್ಡು ಕಾಸು ಅದೆಲ್ಲೊ ಹರಿದು ಹೋಗುತ್ತಿದೆಯಲ್ಲ ಎಂಬ ಸಂಕಟ ನನ್ನ ಕಾಡುತ್ತಿದೆಯೇ? ನನಗೆ, ನನ್ನ ಮಕ್ಕಳಿಗೆ ಇವರು ಹೀಗೆ ಮಾಡುವುದರಿಂದ ಅನ್ಯಾಯವಾಗುತ್ತಿದೆ.. ಆಸ್ತಿ ಕಮ್ಮಿಯಾಗಿಬಿಡುತ್ತದೆ ಎಂಬ ಸಂಕಟವೇ.

ವಿಕ್ರಮ ನನ್ನವರು ಎಂಬ ಗಾಢವಾದ ಭಾವನೆ ನನ್ನಲ್ಲಿ ಇಲ್ಲ. ಅದು ಬೆಳೆಯಲು ಇವರು ಸಹಕರಿಸಲೇ ಇಲ್ಲ. ಮದುವೆ ಎಂದರೆ ದೇಹಗಳು ಒಂದಾಗುವ ಕ್ರಿಯೆಗೆ ಹಿರಿಯರು ಕೊಡುವ ಸಮ್ಮತಿ, ಮಕ್ಕಳನ್ನು ಈ ಭೂಮಿಗೆ ತರಲು ಸಮಾಜ ಕೊಡುವ ಅನುಮತಿ ಅಷ್ಟೇ. ಭಾವನೆ, ಮನಸ್ಸುಗಳು ಒಂದಾಗುವಿಕೆ, ಪ್ರೀತಿ ಪ್ರೇಮ ಎಲ್ಲಾ ಬರೀ ಸಿನಿಮಾಗಳಲ್ಲಿ, ಕಥೆ ಪುಸ್ತಕಗಳಲ್ಲಿ ಅಷ್ಟೇ. ನಿಜ ಜೀವನದಲ್ಲಿ ಇರುವುದು ಬರೀ ಆಕರ್ಷಣೆ. ಅಂಗಡಿಯಲ್ಲಿ ಇರುವ ಸೀರೆ, ಬೊಂಬೆಗೆ ಉಡಿಸಿರುವ ಸೀರೆ, ರಸ್ತೆಯಲ್ಲಿ ಯಾರೋ ಉಟ್ಟು ಹೋಗುತ್ತಿರುವ ಸೀರೆ ಎಲ್ಲಾ ಆಕರ್ಷಕ... ಅದೇ ನನ್ನ ಮನೆಯ ಬೀರು ಸೇರಿದರೆ, ನಾನೇ ಉಟ್ಟರೆ ಅದರ ಆಕರ್ಷಣೆ ಮಾಯವಾಗುವುದಿಲ್ಲವೇ.. ಇವರ ದೃಷ್ಟಿಯಲ್ಲಿ ಹೆಣ್ಣು ಅಷ್ಟೇ. ಒಂಬತ್ತು ವರ್ಷ, ಎರಡು ಮಕ್ಕಳು ಸಾಕು.. ಹಿಂದೆ ಬಿದ್ದು ಕಟ್ಟಿಕೊಂಡ ನನ್ನ ಆಕರ್ಷಣೆ ತಗ್ಗಲು... ಆದರೆ ಜವಾಬ್ದಾರಿಯಿದೆಯಲ್ಲ.. ಎಂಬುದು ಸಮಜಾಯಿಷಿ!..

ಪ್ರೀತಿಗೂ, ಜವಾಬ್ದಾರಿಗೂ ವತ್ಯಾಸವಿಲ್ಲವೇ? ಈ ಸೂಕ್ಷ್ಮಗಳನ್ನು ಯೋಚಿಸುತ್ತಾ ಎಳೆ ಎಳೆ ಬಿಡಿಸುತ್ತಾ ಹೋಗುವುದು ನನ್ನ ತಪ್ಪು...

ನಾನು ಚೆಂದವಿರಬೇಕು... ನನ್ನ ಮನಸ್ಸಂತೋಷಕ್ಕಾಗಿ... ಇವರನ್ನು ಮೆಚ್ಚಿಸಲಿಕ್ಕಲ್ಲ.. ಮನೆಯಲ್ಲೇ ಇರುವ, ಇವರು ಇವರಿಗಾಗಿ ಸಜ್ಜುಗೊಳಿಸಿಕೊಂಡಿರುವ ಜಿಮ್ಮಿನ ಪೂರ್ಣ ಪ್ರಯೋಜನ ಪಡೆದುಕೊಳ್ಳಬೇಕು.. ಪ್ರೀತಿಗೆ ಹೇಳಿದರೆ ಯಾರಾದರೂ ಟ್ರೇನರ್‌ನ ಗೊತ್ತು ಮಾಡಿ ಕೊಡ್ತಾಳೆ... ದುಡ್ಡಿನ ಮುಖ ಯಾರೂ ನೋಡುವುದಿಲ್ಲ ಈ ಮನೆಯಲ್ಲಿ... ನಿರ್ಧಾರ ಗಟ್ಟಿಯಾಗುತ್ತಿದ್ದ ಹಾಗೆ ನೆಮ್ಮದಿ ಮೂಡಿತು.

****

ಅಮ್ಮನ ಮನೆಗೆ ಹೋಗಿ ಇದ್ದು ಬಿಡ್ತೀನಿ ಎಂದು ಹೇಳಿ ಹೋಗಿ ಅಲ್ಲಿ ಇರಲಾರದೆ ಹಿಂತಿರುಗಿ ಐದು ವರ್ಷದ ಮೇಲಾಯಿತು. ಬದಲಾಗಿದ್ದು ನಾನಷ್ಟೇ ಇನ್ನೆಲ್ಲಾ ಅದೇ.. ಅಜ್ಜಿ ಮತ್ತಷ್ಟು ಮೆತ್ತಗಾಗಿದ್ದಾರೆ. ಮಾವ ಶಾಲೆ, ಕಾಲೇಜು ಎರಡರ ಮೇಲುಸ್ತುವಾರಿ ನೋಡಿಕೊಂಡು ಮಿಕ್ಕಿದ್ದೆಲ್ಲಾ ಇವರ ಸುಪರ್ದಿಗೆ ಬಿಟ್ಟಿದ್ದಾರೆ. ಅತ್ತೆ ಮನೆಯ, ಅಡಿಗೆಮನೆಯ ಉಸ್ತುವಾರಿ ನೋಡಿಕೊಳ್ಳುತ್ತಾ ಮೊಮ್ಮಕ್ಕಳಿಗೆ ಬೇಕಾದ್ದ ಮಾಡಿಕೊಡುತ್ತಾ ದಿನವಿಡೀ ಬಿಡುವಿಲ್ಲದೆ ಇರುತ್ತಾರೆ. ರಾಹುಲ್ ಆರನೇ ತರಗತಿ, ರಾಧಿಕಾ ನಾಲ್ಕನೇ ತರಗತಿ ಓದುತ್ತಿದ್ದಾರೆ. ಶಾಲೆಯೇ ತಮ್ಮ ತಾತನದು ಎಂಬ ಅಹಂಭಾವ ಚೆನ್ನಾಗಿ ಬೆಳೆದಿದೆ. ಹುಟ್ಟಿನಿಂದ ಶ್ರೀಮಂತಿಕೆ ಬಂದರೆ ಅದರ ಗತ್ತು ಗಮ್ಮತ್ತು ಹೇಗಿರುತ್ತದೆ ಎಂಬುದು ಇವರಿಬ್ಬರನ್ನು ನೋಡಿದರೆ ಗೊತ್ತಾಗುತ್ತದೆ. ಮುದ್ದಾದ ಮಕ್ಕಳು. ಆದರೆ ಅರಮನೆಯಲ್ಲಿ ಬೆಳೆದ ಸಿದ್ಧಾರ್ಥನ ಹಾಗೆ... ನೋವು, ಹಸಿವು, ಸಾವು... ಯಾವುದರ ಅರಿವೂ ಇಲ್ಲ.

ಇವರು... ವಿಕ್ರಮ ಹಳ್ಳಿ ಮನೆ.. ಆ ಚಿತ್ರ ನಟಿ ಬಿಟ್ಟಳೋ ಇವರೇ ಬಿಟ್ಟರೋ.. ಗೊತ್ತಿಲ್ಲ.. ಆ ಸಂಬಂಧ ಈಗಿಲ್ಲ... ಆದರೆ ಬೇರೆ ಸಂಬಂಧಗಳು... ಹುಟ್ಟಿಕೊಂಡಿವೆ.. ಸತ್ತಿವೆ... ಕಿವಿಗೆ ಬಿದ್ದವು ಕೆಲವು.. ಬೀಳದೆ ಹೋದವು ಗೊತ್ತಿಲ್ಲ.. ಲೆಕ್ಕವಿಲ್ಲ...

ಕತ್ತಲೆಯಲ್ಲಿ ಎಲ್ಲಾ ಹೆಣ್ಣುಗಳು ಒಂದೇ... ಎಂದೆಲ್ಲೊ ಓದಿದ್ದೆ.. ಛೀ ಹೊಲಸು ಎಂದುಕೊಂಡಿದ್ದೆ.. ಆದರೆ ಇವರು ಇಟ್ಟುಕೊಳ್ಳುವ.. ಬಿಟ್ಟುಕೊಡುವ ವೈಖರಿಯನ್ನು ನೋಡಿದರೆ.. ನಾನು ಓದಿದ್ದು ಸುಳ್ಳೇನೋ ಅನ್ನಿಸುತ್ತದೆ.. ಅಥವಾ... ಇನ್ನೊಂದು ಹೆಣ್ಣು ಬೇರೆ ಇನ್ನೇನೋ ಸುಖ ಕೊಡುತ್ತಾಳೆ ಎಂದು ಇವರು ಹುಡುಕುತ್ತಿರುವರೇನೋ ಗೊತ್ತಿಲ್ಲ... ಇವರ, ಇವರ ಸಂಬಂಧಗಳ ಬಗ್ಗೆ ನಿರ್ಲಿಪ್ತತೆ ಬೆಳೆಸಿಕೊಂಡಿದ್ದೇನೆ. ಬರುವ ಕೋಪ, ಆಗುವ ಬೇಸರವನ್ನು ಜಿಮ್ಮಿನಲ್ಲಿ ಕಳೆಯುತ್ತೇನೆ. ಮೈ ಮನಸ್ಸು ಎರಡೂ ಹಗುರ..

ಹನ್ನೆರಡು ವರ್ಷದ ಮಗನಿದ್ದಾನೆಯೇ?! ಏನು? ಹನ್ನೆರಡನೇ ವಯಸ್ಸಿನಲ್ಲಿ ಹುಟ್ಟಿದವನೇ? ಎಂದು ಅಪರಿಚಿತರು ಉದ್ಗರಿಸುವಷ್ಟು ಸಪೂರವಾಗಿ ಇದ್ದೇನೆ. ಕೂದಲು.. ಅಷ್ಟೇ.. ದಟ್ಟ ದಪ್ಪ...! ಆದರೆ ಸೊಂಟದವರೆಗೆ ಕತ್ತರಿಸಿಕೊಂಡ್ದೇನೆ... ಅಂದುಕೊಂಡಿದ್ದು ಸಾಧಿಸಿದ್ದೇನೆ. ಇಷ್ಟು ಸುಂದರ ಹೆಂಡತಿಯನ್ನು ಮನೆಯಲ್ಲಿ ಇಟ್ಟುಕೊಂಡು ಬೀದಿಯಲ್ಲಿ ಅಲೆಯುವ ಇವರ ಬಗ್ಗೆ ಲೋಕಲ್ ಪೇಪರಿನಲ್ಲಿ ಆಗಾಗ ವ್ಯಂಗ್ಯ ಬರಹಗಳ ಅಚ್ಚಾಗುತ್ತವೆ. ಓದಿದಾಗ ಬೇಸರಕ್ಕಿಂತ ಅಸಹ್ಯವಾಗುತ್ತದೆ.

ಅಪ್ಪ ಅಮ್ಮ ಮಾಮೂಲಿ. ತಮ್ಮ ನಾಗೇಂದ್ರನಿಗೆ ಮದುವೆಯಾಗಿ ಮೂರು ವರ್ಷದ ಮಗಳಿದ್ದಾಳೆ. ಐದು ವರ್ಷದ ಹಿಂದೆ ಹಿಂತಿರುಗಿದವಳು ಮತ್ತೊಂದು ಅಮ್ಮನ ಮನೆಯ ದಾರಿ ಹೊಕ್ಕಿಲ್ಲ ನಾನು. ಬೆಂಗಳೂರಿನಲ್ಲಿ ಆದ ನಾಗೇಂದ್ರನ್ನ ಮದುವೆಗೆ ಅತ್ತೆ, ಮಾವ, ಇವರು, ರಾಹುಲ್ ರಾಧಿಕಾಳೊಂದಿಗೆ ಹೋಗಿ ಅಲ್ಲಿಂದಲೇ ಮನೆಗೆ ಹಿಂತಿರುಗಿದ್ದು.. ದೇವರ ಕಾರ್ಯಕ್ಕೂ ತಾಯಿಯ ಮನೆಗೆ ಹೋಗಲಿಲ್ಲ.. ಅದೂ ಒಂದು ಹಠವೇ... ನಿನ್ನ ಸ್ಥಾನ ನಿನ್ನ ಗಂಡನ ಮನೆಯಲ್ಲಿ.. ಈ ಮನೆಯಲ್ಲಿ ನಿನಗೆ ಸ್ಥಾನವಿಲ್ಲ.. ಹಕ್ಕಿಲ್ಲ. ಆಸರೆಯೂ ಇಲ್ಲ ಎಂದು ಆಶ್ರಯ ಬೇಡಿ ಬಂದವಳನ್ನು ತಿರಸ್ಕರಿಸಿದ ಆ ತೌರು ನನಗೆ ಬೇಡ..

ಬಂದು ಕುಂಕುಮ ಹಚ್ಚಿಕೊಂಡು ಹೋಗಬಾರದೆ? ದೇವರ ಸಮಾರಾಧನೆ, ಗೌರಿ ಹಬ್ಬ.. ಯಾವುದಕ್ಕೂ ಬರುವುದಿಲ್ಲ ಎಂದರೆ ಹೇಗೆ? ಅಮ್ಮ ಕಣ್ಣೀರು ಸುರಿಸಿ, ನ್ಯಾಯ ಕೇಳಿ ಅನೇಕ ಬಾರಿ ವಿಚಾರಿಸಿದ್ದಾಳೆ.

ಆಯ್ತು ನಿನ್ನ ಕರ್ತವ್ಯ ನೀನು ಮಾಡಿದ್ದೀಯ.. ಕುಂಕುಮ ಹಚ್ಚಿಕೊಂಡು, ಆ ಮನೆ ಬಿಟ್ಟು ಬಂದಾಗಿದೆ. ಸಾಕು.. ಋಣ ಇದ್ದಿದ್ದು ಅಷ್ಟೇ... ಇದು ನನ್ನ ಮನೆ. ನನಗೆ ಅಲ್ಲಿ ಯಾರು ಬೇಡ. ನಿನಗೆ ನನ್ನ ನೋಡಬೇಕು ಅನ್ನಿಸಿದರೆ ನೀನೇ ಬಾ ಇಲ್ಲದಿದ್ದರೆ ಬೇಡ ಬಂದು ಅತ್ತು ಕರೆದು ಜಗಳವಾಡುವ ಹಾಗಿದ್ದರೆ ಬರಲೇಬೇಡ.. ನನಗೆ ಜಗಳವಾಡಲು ಶಕ್ತಿಯಿಲ್ಲ.. ನಿಮ್ಮ ಮನೆಗೆ ಬರಲು ಮನಸ್ಸಿಲ್ಲ ಎಂದು ಖಡಾಖಂಡಿತವಾಗಿ ಅಮ್ಮ ಅಪ್ಪನಿಗೆ ಹೇಳಿದ್ದೇನೆ. ಅತ್ತೆಯ ಕೈಲೂ ನನ್ನ ಕಠಿಣ ಮಾತಿಗೆ ಬೈಯ್ಸಿಕೊಂಡಿದ್ದೇನೆ. ಆದರೆ ಮನಸ್ಸು ಮುರಿದಿದೆ. ನಾನೇನು ಮಾಡಲಾರೆ.

ಅತ್ತೆ, ಮಾವ, ಗಂಡನಿಗಿಂಥ ನನ್ನ ಹುಟ್ಟಿಗೆ ಕಾರಣರಾದ, ನನ್ನ ಸಾಕಿ ಬೆಳೆಸಿದ ಅಪ್ಪ ಅಮ್ಮನಲ್ಲಿ ನನಗೆ ನಂಬಿಕೆಯಿತ್ತು. ನನಗೆ ಕಷ್ಟವಾಗಿದೆ, ನನಗೆ ಮೋಸವಾಗಿದೆ.. ನಿಮ್ಮ ಆಸರೆ ಬೇಕು ಎಂದು ನಾನು ಹೋದರೆ ಅವರು ಕೈ ಚಾಚಿ ಬರಮಾಡಿಕೊಳ್ತಾರೆ ಎಂದುಕೊಂಡಿದ್ದೆ. ಆ ಮನೆ... ನಾನು ಹುಟ್ಟಿ ಬೆಳೆದ ಆ ಮನೆ ನನ್ನದು ಎಂದುಕೊಂಡಿದ್ದೆ. ಆದರೆ ಐದು ವರ್ಷದ ಹಿಂದೆ ಆಸರೆ ಬಯಸಿ, ಬೇಡಿ ಹೋದ ನನ್ನನ್ನು ತಿರಸ್ಕರಿಸಿದರು. ಆ ಮನೆಗೆ ನಾನು ಪರಕೀಯಳು ಎಂದು ಸ್ವತಃ ಅಮ್ಮನೇ ಹೇಳಿದಳು... ಬೇಡ ಹಿಂತಿರುಗಿ ಹೋಗುವುದಿಲ್ಲ ಎಂದು ಬೇಡಿ ಕೊಂಡರೂ ನನ್ನನ್ನು, ನನ್ನ ಮಕ್ಕಳನ್ನು ಕರೆದುಕೊಂಡು ಬಂದು ಇಲ್ಲಿ ಬಿಟ್ಟು ಹೋದರು.

ನವೆಂಬರ್ ಹತ್ತೊಂಬತ್ತು.. ನನ್ನ ತವರು ನನ್ನ ತಿರಸ್ಕರಿಸಿದ ದಿನ ಎಂದೂ ಮರೆಯಲಾರೆ.. ನನ್ನ ನಂಬಿಕೆ ಬುಡಮೇಲು ಆದ ದಿನ. ನನ್ನ ಪಾಲಿಗೆ ಒಂದು ನೆಲೆ ಕರಗಿ ಹೋದ ದಿನ..

ಆದಾಗಿ ಐದು ವರ್ಷಗಳು ಉರುಳಿವೆ. ಕಾಲಕ್ಕೆ ಯಾವುದರ ಹಂಗೂ ಇಲ್ಲ, ಅದನ್ನು ತಡೆಯೋರು ಇಲ್ಲ.. ನೆನ್ನೆ ಸತ್ತು, ಇಂದು ಹುಟ್ಟಿ, ಇದನ್ನು ಕೊಲ್ಲಲು ನಾಳೆ ಬರುತ್ತಾ.. ನಾಳೆಯ ಹಿಂದೆಯೇ ನಾಡಿದ್ದು ತಯಾರಾಗಿ ನಿಂತು...ನಮಗೆ ಬೇಕಿರಲಿ.. ಬೇಡದಿರಲಿ.. ನಾವೂ ಈ ಕಾಲಚಕ್ರದಲ್ಲಿ ಸಿಕ್ಕಿ... ಹಿರಿಯರನ್ನು ಕಳೆದುಕೊಳ್ಳುತ್ತಾ ಕಿರಿಯರು ಪ್ರೌಢರಾಗುವುದನ್ನು ನೋಡುತ್ತಾ... ಇದರ ಮಧ್ಯೆ ನಮ್ಮ ಸ್ಥಾನ ಗುರುತಿಸಿಕೊಳ್ಳುತ್ತಾ... ಜೀವನ ಸಾಗುತ್ತಿರುತ್ತದೆ. ಹೊಸ ಹೊಸ ಆಸಕ್ತಿಗಳನ್ನು ಗುರುತಿಸಿಕೊಳ್ಳುವುದು, ನಮ್ಮ ಜೀವನಕ್ಕೆ ಬದುಕಿಗೆ ಹೊಸ ಹೊಸ ಮಜಲನ್ನು ಹುಟ್ಟಿಸಿಕೊಳ್ಳುವುದು ನಮಗೆ ಸೇರಿದ್ದು. ಆ ನಿಟ್ಟಿನಲ್ಲಿ ನಾನು ಹುಟ್ಟು ಹಾಕಿದ ಸ್ತ್ರೀ ಶಕ್ತಿ ಕೇಂದ್ರ..... ನನ್ನಲ್ಲಿ ಹೊಸ ಉತ್ಸಾಹವನ್ನು ಮೂಡಿಸಿದೆ. ಮೂರು ವರ್ಷದ ಹಿಂದೆ ಕೆಲಸದವಳ ನಾದಿನಿ ಕೆಲಸ ಕೇಳಿಕೊಂಡು ಬಂದಾಗ ಹೊಳೆದ ಸಂಗತಿ... ಕೊಂಚ ಹಣ ಹೊಡಿದರೆ ಈ ಮಹಿಳೆಯರು ಮನೆಯಲ್ಲೇ ಹಪ್ಪಳ ಮಾಡಿಯೋ, ಊದುಬತ್ತಿ ಹೊಸೆದೋ ಜೀವನ ಕಂಡುಕೊಳ್ಳಬಹುದು... ಅವರಿವರ ಮನೆ ಬಾಗಿಲಿಗೆ ಹೋಗುವ ಅವಶ್ಯಕತೆಯಿಲ್ಲ...

## ಸ್ತ್ರೀಶಕ್ತಿ ಕೆಲಸ ಶುರು